**ಕರ್ನಾಟಕ ಸರ್ಕಾರ**
**ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ**
ಕಾಳಿದಾಸ ಮಾರ್ಗ, ಕೆ.ಜಿ.ರಸ್ತೆ, ಗಾಂಧಿನಗರ, ಬೆಂಗಳೂರು-560009

**ಸಂಖ್ಯೆ:** KPRC-CSM/25/2025 **ದಿನಾಂಕ:**04.02.2025

## ನೇಮಕಾತಿ ಪ್ರಕಟಣೆ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯದಲ್ಲಿ ಈ ಕೆಳಕಂಡ ಹುದ್ದೆಗೆ ಮುಂದಿನ ಒಂದು ವರ್ಷದ ಅವಧಿಗೆ ಗುತ್ತಿಗೆ ಆಧಾರದಲ್ಲಿ ನೇಮಕಾತಿ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಹುದ್ದೆಯ ವಿವರ, ವಿದ್ಯಾರ್ಹತೆ, ಅನುಭವ, ಮಾಸಿಕ ವೇತನ:

| ಹುದ್ದೆ | ಹುದ್ದೆಗಳ ಸಂಖ್ಯೆ | ಮಾಸಿಕ ಸಂಭಾವನೆ | ವಿದ್ಯಾರ್ಹತೆ | ಅನುಭವ |
|---|---|---|---|---|
| ಸಮಾಲೋಚಕರು | 01 | ಮಾಸಿಕ ಸಂಭಾವನೆ ರೂ.40,000/- (ಆದಾಯ ತೆರಿಗೆ ಒಳಗೊಂಡಂತೆ) | ಯಾವುದೇ ಸ್ನಾತಕೋತ್ತರ ಪದವಿ, Kannada Proficiency & Computer knowledge in MS Office. | ಯಾವುದೇ ಸರ್ಕಾರಿ ಕಛೇರಿಯಲ್ಲಿ ಕನಿಷ್ಠ 03 ವರ್ಷ ಹೊರಗುತ್ತಿಗೆ/ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡಿದ ಅನುಭವ ಹೊಂದಿರಬೇಕು. |

### ಆಯುಕ್ತಾಲಯದಲ್ಲಿ ನಿರ್ವಹಿಸಬೇಕಾದ ಜವಾಬ್ದಾರಿಗಳು:

1. ಇಲಾಖಾ ವತಿಯಿಂದ ಅನುಷ್ಠಾನಗೊಳಿಸುವ ವಿವಿಧ ಕಾರ್ಯಕ್ರಮಗಳ ಪ್ರಗತಿ ವಿವರಗಳನ್ನು ಜಿಲ್ಲೆಗಳಿಂದ ಸಂಗ್ರಹಿಸಲು ನಮೂನೆಗಳನ್ನು ಸಿದ್ಧಪಡಿಸುವುದು.
2. ವಿವಿಧ ಕಾರ್ಯಕ್ರಮಗಳ ಪ್ರಗತಿ ಕುರಿತು ಜಿಲ್ಲೆಗಳಿಂದ ಮಾಹಿತಿ ಸಂಗ್ರಹಿಸುವುದು.
3. ಪ್ರಗತಿ ಪರಿಶೀಲನಾ ಸಭೆಗಳಿಗೆ ವರದಿಗಳನ್ನು ಸಿದ್ಧಪಡಿಸುವುದು.
4. ಲೆಕ್ಕ ಪತ್ರ ಶಾಖೆಗೆ ಸಂಬಂಧಿಸಿದ ಆರ್ಥಿಕ ಪ್ರಗತಿ ವರದಿಗಳನ್ನು ತಯಾರಿಸುವುದು.
5. ಆಯವ್ಯಯ ತಯಾರಿಕೆ ಹಾಗೂ ಪತ್ರ ವ್ಯವಹಾರ.
6. ಆಯುಕ್ತಾಲಯದಿಂದ ಸೂಚಿಸಲಾಗುವ ಇತರೆ ಕಾರ್ಯಗಳನ್ನು ನಿರ್ವಹಿಸುವುದು.
7. ಆಯುಕ್ತಾಲಯದಲ್ಲಿ ನಡೆಯುವ ಸಭೆಗಳಿಗೆ ನಡಾವಳಿಗಳನ್ನು ಸಿದ್ಧಪಡಿಸುವುದು.
8. ಆಯುಕ್ತಾಲಯದ ಎಲ್ಲಾ ಶಾಖೆಗಳೊಂದಿಗೆ ಸಮನ್ವಯಿಸಿ ಮಾಹಿತಿಯನ್ನು ಕ್ರೋಢೀಕರಿಸುವುದು.

...ಮುಂದುವರೆದಿದೆ

**ವಯೋಮಿತಿ:** ಗರಿಷ್ಠ 35 ವರ್ಷಗಳು.

**ನೇಮಕಾತಿ ಷರತ್ತುಗಳು:**

1. ಉತ್ತಮ ಶೈಕ್ಷಣಿಕ ಹಿನ್ನಲೆ ಹೊಂದಿರಬೇಕು ಮತ್ತು ತಂಡವಾಗಿ ಕಾರ್ಯನಿರ್ವಹಿಸಲು ಸಾಮರ್ಥ್ಯ ಹೊಂದಿರಬೇಕು.

**ನೇಮಕಾತಿ ವಿಧಾನ:**

Walk-In-Interview ನಡೆಸುವುದರೊಂದಿಗೆ, ಅಭ್ಯರ್ಥಿಗಳ ವಿದ್ಯಾರ್ಹತೆ ಮತ್ತು ಅನುಭವದ ಆಧಾರದ ಮೇಲೆ ಆಯ್ಕೆ ಮಾಡಲಾಗುವುದು.

ದಿನಾಂಕ:12.02.2025 ರಂದು ಬೆಳಿಗ್ಗೆ 11.00ಗಂಟೆಗೆ ಆಯುಕ್ತಾಲಯದ ಕಛೇರಿಯಲ್ಲಿ ನೇರ ಸಂದರ್ಶನ(Walk-In Interview) ಪ್ರಾರಂಭವಾಗಲಿದ್ದು, ಆಸಕ್ತ ಅಭ್ಯರ್ಥಿಗಳು ದಾಖಲೆಗಳ ಪರಿಶೀಲನೆಗಾಗಿ ಬೆಳಿಗ್ಗೆ 9.30ಗಂಟೆಗೆ ಆಯುಕ್ತಾಲಯದ ಕಛೇರಿಯಲ್ಲಿ ಹಾಜರಾಗಲು ತಿಳಿಸಿದೆ.

**(ಟಿಪ್ಪಣಿ ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)**

ಉಪ ನಿರ್ದೇಶಕರು(ಆಡಳಿತ),
ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ.

ಪ್ರತಿ

1. ಸೂಚನಾ ಫಲಕ